



# ಒಂದು ಪುಟ್ಟ ಹಕ್ಕಿ ಕತೆ

■ ಪ್ರಸಾದ್ ಶೆಣೈ ಆರ್.ಕೆ.

ಆ ದಿನ ಮಳೆ ಬಂದು ತಂಪಾಗಿದ್ದ ಮಂಜಾನೆ. ಅಪ್ಪನಿಗೆ ಯಾವುದೋ ಅಂಗಡಿಯ ಮೂಲೆಯೊಂದರಲ್ಲಿ ಗುಬ್ಬಚ್ಚಿಯೊಂದು ವಿಲವಿಲನೇ ಒದ್ದಾಡುತ್ತ ಬಿದ್ದಿದ್ದು ಕಂಡಿತ್ತು. ಅದನ್ನವರು ಸಣ್ಣದೊಂದು ಪೆಟ್ಟಿಗೆಯಲ್ಲಿ ಹಾಕಿ ಏನಾದರೂ ಶುಶ್ರೂಷೆ ಮಾಡಲು ಸಾಧ್ಯವಾ ನೋಡೋಣ ಎಂದು ಮನೆಗೆ ತಗೊಂಡೇ ಬಂದರು.

ಪೆಟ್ಟಿಗೆಯಲ್ಲಿ ಮುದುಡಿ ಅತ್ತ ಕೂಗಲೂ ತ್ರಾಣವಿಲ್ಲದೇ, ಹಾರಲು ಆಗದೇ ಪೆಟ್ಟಾಗಿ ಕೂತಿದ್ದ ಗುಬ್ಬಚ್ಚಿಯನ್ನು ನೋಡಿ ನನಗೊಂದು ಕ್ಷಣ ಏನು ಮಾಡಬೇಕೋ ಗೊತ್ತಾಗಲಿಲ್ಲ. ಚಮಚದಲ್ಲಿ ನೀರು ಕುಡಿಸಲು ನೋಡಿದರೆ ನೀರಿನ ಒಂಚೂರು ಪಸೆಯೂ ಅದರ ಬಾಯಿಗಿಳಿದಂತೆ ಕಾಣಲಿಲ್ಲ. ಕಂಗಾಲಾಗಿ ನನ್ನ ಸ್ನೇಹಿತ, ಪಕ್ಷಿ ವೀಕ್ಷಕ ಅಮಿತ್‌ಗೆ ಫೋನಾಯಿಸಿ ಒಂದು ಮರಿಗುಬ್ಬಚ್ಚಿ ಸಿಕ್ಕಿದ್ದನ್ನು ತಿಳಿಸಿದೆ. ಪಕ್ಷಿಗಳೆಂದರೆ ಓಡೋಡಿ ಬರುವ ಅವನಿಗೆ, ಈಗ ಮರಿಗುಬ್ಬಚ್ಚಿಯ ಸುದ್ದಿ ಕೇಳಿ ತಡೆಯಲಾರದೇ ಹತ್ತೇ ನಿಮಿಷದಲ್ಲಿ ಮನೆಯತ್ತ ಅವನ ಸವಾರಿ ಬಂತು.

ಪೆಟ್ಟಿಗೆಯಲ್ಲಿದ್ದ ಮರಿಗುಬ್ಬಿಯನ್ನು ನೋಡಿದವನೇ, 'ಅದಕ್ಕೆ ಮಗುವಿಗೆ ಕುಡಿಸುವ ಹಾಗೆ ಸೆರಿಲ್ಯಾಕ್ ಕುಡಿಸಬೇಕೆಂದೂ, ಇದಿನ್ನೂ ಸಣ್ಣ ಮರಿಯಾದುದರಿಂದ ಚಮಚದ ಬದಲು ಸಣ್ಣ ಸಿರಿಂಜ್‌ನಲ್ಲಿ ತುಂಬಿಸಿ ಕುಡಿಸಬೇಕೆಂದು ಹೇಳಿದ. ಇದು ಸಣ್ಣ ಮರಿಯಾದುದರಿಂದ ತಾನೇ ಮನೆಗೆ ಕೊಂಡೊಯ್ದು ಶುಶ್ರೂಷೆ ಮಾಡುತ್ತೇನೆಂದೂ ಹೇಳಿ, ಬಂದ ವೇಗದಲ್ಲೇ ಗುಬ್ಬಚ್ಚಿಯನ್ನು ತನ್ನ ಮನೆಗೆ ಕೊಂಡೊಯ್ದ ಅಮಿತ್.

ಮನೆಯಲ್ಲಿ ಗುಬ್ಬಚ್ಚಿ ಚೇತರಿಸಿಕೊಳ್ಳಲು ಬೇಕಾದ ಸಾಮಾನ್ಯ ಆರೈಕೆಗಳನ್ನೆಲ್ಲ ಅಮಿತ್ ಮಾಡಿದ. ಅವನ ಆರೈಕೆಯ ಕ್ರಮಗಳನ್ನೂ, ಆ ಗುಬ್ಬಿ ಅದಕ್ಕೆ ಹೇಗೆ ಸ್ಪಂದಿಸುತ್ತದೆ ಎನ್ನುವುದನ್ನೂ ನಾನೂ ಅವನ ಮನೆಗೆ ಹೋಗಿ ನೋಡತೊಡಗಿದೆ. ಎರಡೇ ದಿನದಲ್ಲಿ ಸೆರಿಲ್ಯಾಕ್ ಕುಡಿದ ಗುಬ್ಬಿ ಉತ್ಸಾಹದಿಂದ ಪುಟಿಯತೊಡಗಿತು. ಚಿಂವ್ ಚಿಂವ್ ಎಂದು ಮನೆಯ ತುಂಬಾ ಕೇಕೆ ಹಾಕತೊಡಗಿತು. ಎರಡು ದಿನಗಳ ಹಿಂದೆ ಪೆಟ್ಟಿಗೆಯಲ್ಲಿ ಮುದುಡಿ ಕೂತ ಗುಬ್ಬಿ, ಈಗ ರೆಕ್ಕೆ ಬಿಚ್ಚಿ ಪಟಪಟನೇ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಹಾರತೊಡಗಿತು. ಸಾಯಲು ಬಿದ್ದಿದ್ದ ಆ ಹಕ್ಕಿ ಈಗ ಹೀಗೆಲ್ಲಾ ಖುಷಿಯಿಂದ ಹಾರತೊಡಗಿದರೆ ಮನಸ್ಸಿನೊಳಗೆ ಎಷ್ಟೊಂದು ಆನಂದವಾಗುವುದಿಲ್ಲ ಹೇಳಿ?

